# ಸೋರಿಕೆ: ರಾಷ್ಟ್ರೀಯ ಲಜ್ಜೆ

ಪ್ರತಿವರ್ಷವೂ ಪರೀಕ್ಷೆಗಳನ್ನು ತಪ್ಪುಗಳಿಲ್ಲದಂತೆ ನಡೆಸಲು ಸಾಧ್ಯವಿಲ್ಲ ಎನ್ನುವ ಸ್ಥಿತಿಗೆ ತಲುಪಿರುವುದು ಶಿಕ್ಷಣ ವ್ಯವಸ್ಥೆಯ ಅಧೋಗತಿಯನ್ನು ತೋರಿಸುತ್ತದೆ. ಪರೀಕ್ಷೆಯ ಅವ್ಯವಸ್ಥೆ, ಪ್ರಶ್ನೆಪತ್ರಿಕೆಗಳ ಸೋರಿಕೆ, ಟ್ಯೂಷನ್ ಮಾಫಿಯಾ– ಇವೆಲ್ಲದರ ನಡುವೆ ಏಗಬೇಕಾದ ಮಕ್ಕಳು ನೈತಿಕ ಮೌಲ್ಯವನ್ನು ರೂಢಿಸಿಕೊಳ್ಳಬೇಕು ಎಂದು ಬಯಸುವ ವಿಪರ್ಯಾಸವನ್ನು ನಮ್ಮ ಶಿಕ್ಷಣ ವ್ಯವಸ್ಥೆ ಕಲ್ಪಿಸಿದೆ.

ಹತ್ತು ಮತ್ತು ಹನ್ನೆರಡನೇ ತರಗತಿಯ ಪ್ರಶ್ನೆಪತ್ರಿಕೆಗಳ ಸೋರಿಕೆಗೆ ಸಂಬಂಧಿಸಿದಂತೆ ಕೇಂದ್ರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಸುದ್ದಿಯಲ್ಲಿದೆ. ಪರೀಕ್ಷಾ ಪ್ರಕ್ರಿಯೆಯಲ್ಲಿನ ಅವ್ಯವಸ್ಥೆಯ ಮೂಲಕ 'ಸಿಬಿಎಸ್‌ಇ' ಸುದ್ದಿಯಲ್ಲಿರುವುದು ವಾರ್ಷಿಕ ಸಂಪ್ರದಾಯವೇ ಆಗಿದೆ. ಕಳೆದ ವರ್ಷ 12ನೇ ತರಗತಿಯ ಮೌಲ್ಯಮಾಪನದಲ್ಲಿ ಉಂಟಾಗಿದ್ದ ಅಡೆತಡೆಗಳ ಕಾರಣದಿಂದಾಗಿ ವಿದ್ಯಾರ್ಥಿಗಳು ಮತ್ತು ಪೋಷಕರ ಕೆಂಗಣ್ಣಿಗೆ ಪರೀಕ್ಷಾ ಮಂಡಳಿ ಗುರಿಯಾಗಿತ್ತು. ಈ ವರ್ಷ 10ನೇ ತರಗತಿಯ ಗಣಿತ ಹಾಗೂ 12ನೇ ತರಗತಿಯ ಅರ್ಥಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳ ಸೋರಿಕೆಯಿಂದಾಗಿ ಪ್ರತಿಭಟನೆ ಎದುರಿಸುತ್ತಿದೆ. 12ನೇ ತರಗತಿಯ ಅರ್ಥಶಾಸ್ತ್ರದ ಮರುಪರೀಕ್ಷೆ ನಡೆಸಲು ಮುಂದಾಗಿರುವ ಮಂಡಳಿ, 10ನೇ ತರಗತಿ ಮರುಪರೀಕ್ಷೆ ಕುರಿತಂತೆ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಗಣಿತ ವಿಷಯಕ್ಕೆ ಸಂಬಂಧಿಸಿದ ಮರು ಪರೀಕ್ಷೆ ನಡೆದರೂ ಹರಿಯಾಣ ಮತ್ತು ದೆಹಲಿಯಲ್ಲಿ ಮಾತ್ರ ನಡೆಯಲಿದೆ ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಾಲಾ ಶಿಕ್ಷಣ ವಿಭಾಗದ ಅಧಿಕಾರಿ ತಿಳಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆಯಂತಹ ಸಂಗತಿಗಳು ಅಧಿಕಾರಿಗಳ ಪಾಲಿಗೆ ಪರೀಕ್ಷಾ ಪ್ರಕ್ರಿಯೆಯಲ್ಲಿ ಆಗುವ ಒಂದು ಸಹಜ ಲೋಪವಷ್ಟೇ. ಆದರೆ, ಇಂಥ ಲೋಪಗಳು ಅಮಾಯಕ ಮಕ್ಕಳ ಮನಸ್ಸಿನ ಮೇಲೆ ಬೀರುವ ಒತ್ತಡದ ಬಗ್ಗೆ ಅವರಿಗೆ ಯಾವ ಕಾಳಜಿಯೂ ಇದ್ದಂತಿಲ್ಲ. ಒಮ್ಮೆ ಬರೆದ ಪರೀಕ್ಷೆಯನ್ನು ಮತ್ತೆ ಬರೆಯುವಂತೆ ಮಾಡುವುದು ವಿದ್ಯಾರ್ಥಿಗಳ ಮೇಲೆ ಹೇರುವ ಅನಗತ್ಯ ಹೊರೆಯಾಗಿದೆ. ಯಾರೋ ಮಾಡಿದ ತಪ್ಪಿಗೆ ಎಲ್ಲ ವಿದ್ಯಾರ್ಥಿಗಳು ಹಿಂಸೆ ಅನುಭವಿಸುವುದನ್ನು ತಪ್ಪಿಸಲು ಶಿಕ್ಷಣ ಇಲಾಖೆ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿದಂತಿಲ್ಲ. ಪ್ರತಿವರ್ಷದ ಪರೀಕ್ಷೆಯನ್ನು ತಪ್ಪುಗಳಿಲ್ಲದಂತೆ ನಡೆಸಲು ಸಾಧ್ಯವಿಲ್ಲ ಎನ್ನುವ ಸ್ಥಿತಿಗೆ ತಲುಪಿರುವುದು ಶಿಕ್ಷಣ ವ್ಯವಸ್ಥೆಯ ಅಧೋಗತಿಗೆ ಕನ್ನಡಿಯಂತಿದೆ. ಪರೀಕ್ಷೆಯಲ್ಲಿನ ಅವ್ಯವಸ್ಥೆ, ಪ್ರಶ್ನೆಪತ್ರಿಕೆ ಸೋರಿಕೆ, ಟ್ಯೂಷನ್ ಮಾಫಿಯಾ – ಇದೆಲ್ಲದರ ನಡುವೆ ಏಗಬೇಕಾದ ಮಕ್ಕಳು ಮೌಲ್ಯವ್ಯವಸ್ಥೆಯನ್ನು ರೂಢಿಸಿಕೊಳ್ಳಬೇಕೆಂದು ನಮ್ಮ ಶಿಕ್ಷಣ ವ್ಯವಸ್ಥೆ ಬಯಸುತ್ತಿದೆ. ಮೂರು ವರ್ಷಗಳ ಹಿಂದೆ ಪ್ರಶ್ನೆಪತ್ರಿಕೆ ಸೋರಿಕೆಯನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದಂತೆ ತಾನು ಅನುಸರಿಸುವ ಕಠಿಣ ಕ್ರಮಗಳ ಕುರಿತು ಕೇಂದ್ರಸರ್ಕಾರ ಲೋಕಸಭೆಯಲ್ಲಿ ವಿವರಗಳನ್ನು ನೀಡಿತ್ತು. ಈಗ ಹಳೆಯ ಘಟನೆಗಳು ಪುನರಾವರ್ತನೆಯಾಗಿರುವುದನ್ನು ನೋಡಿದರೆ, ಸರ್ಕಾರದ ನೀತಿಸಂಹಿತೆ ಕಾಗದದ ಮೇಲಷ್ಟೇ ಉಳಿದಿರುವಂತಿದೆ. ಪ್ರಸಕ್ತ ಸಾಲಿನಲ್ಲಿ ಪ್ರಶ್ನೆಪತ್ರಿಕೆಗಳ ಸೋರಿಕೆಯ ಪ್ರಮಾದವನ್ನು ಒಪ್ಪಿಕೊಳ್ಳಲು ಕೂಡ ಶಿಕ್ಷಣ ಇಲಾಖೆ ಹಿಂಜರಿದಿತ್ತು. ಪರೀಕ್ಷೆಗೆ ಮೊದಲೇ ವಾಟ್ಸ್ ಆ್ಯಪ್ ಮೂಲಕ ಪ್ರಶ್ನೆಗಳು ಹರಿದಾಡಿದ್ದರೂ, ಸಾರ್ವಜನಿಕರ ತೀವ್ರ ಪ್ರತಿಭಟನೆಯ ನಂತರವೇ ಅದನ್ನು ನಿಜವೆಂದು ಒಪ್ಪಿಕೊಂಡಿದ್ದು ಶಿಕ್ಷಣ ಇಲಾಖೆಯ ಜಡತೆಯನ್ನು ಹಾಗೂ ವ್ಯವಸ್ಥೆ ಭ್ರಷ್ಟವಾಗಿರುವುದನ್ನು ಸೂಚಿಸುವಂತಿದೆ.

ಪ್ರಶ್ನೆಪತ್ರಿಕೆಗಳ ಸೋರಿಕೆಯಲ್ಲಿ ಟ್ಯೂಷನ್ ಮಾಫಿಯಾದ ಕೈವಾಡ ಇರುವುದು ಕೂಡ ಬಹಿರಂಗ ಗುಟ್ಟು. ಮಕ್ಕಳನ್ನು ಅನಗತ್ಯ ಒತ್ತಡಕ್ಕೆ ದೂಡುವ ಟ್ಯೂಷನ್ ವ್ಯವಸ್ಥೆ, ವಿದ್ಯಾರ್ಥಿಗಳ ನಡುವೆ ತರತಮ ಭಾವನೆಯನ್ನೂ ಸೃಷ್ಟಿಸುತ್ತದೆ. ಮನೆಪಾಠಕ್ಕೆ ಬರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕ ದೊರಕಿಸಿಕೊಡಲಿಕ್ಕಾಗಿ ಪರೀಕ್ಷೆಯ ಪ್ರಕ್ರಿಯೆಯಲ್ಲಿ ಟ್ಯೂಷನ್ ಮಾಫಿಯಾದ ಕೈಗಳು ನುಸುಳಿರುವುದನ್ನು ಇಡೀ ವ್ಯವಸ್ಥೆ ಮೂಕಪ್ರೇಕ್ಷಕನಂತೆ ನೋಡುತ್ತಲೇ ಇದೆ. ಪ್ರಶ್ನೆಪತ್ರಿಕೆಗಳು ಸೋರಿಕೆಯಾದಾಗಲೆಲ್ಲ ಮರುಪರೀಕ್ಷೆ ನಡೆಸುವ ಮೂಲಕ ತಪ್ಪನ್ನು ಸರಿಪಡಿಸುವ ಕೆಲಸ ನಡೆಯುತ್ತದೆ. ಆದರೆ, ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸುವ ಮೂಲಕ ಶಿಕ್ಷಣ ಇಲಾಖೆಯನ್ನು ಶುದ್ಧಗೊಳಿಸುವ ಇಚ್ಛಾಶಕ್ತಿಯನ್ನು ಕೇಂದ್ರ ಸರ್ಕಾರ ಪ್ರದರ್ಶಿಸಿಲ್ಲ. ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲ ಎನ್ನುವಂತೆ ರಾಜ್ಯದಲ್ಲಿನ ಹತ್ತು ಮತ್ತು ಪಿಯುಸಿ ತರಗತಿಯ ಪರೀಕ್ಷಾ ಪ್ರಕ್ರಿಯೆ ಕೂಡ ಹುಳುಕುಗಳಿಂದಲೇ ಕೂಡಿದೆ. ತಪ್ಪುಗಳಿಲ್ಲದ ಪ್ರಶ್ನೆಪತ್ರಿಕೆ ತಯಾರಿಕೆಯೇ ಅಸಹಜ ಎನ್ನುವಂಥ ಸ್ಥಿತಿ ಇಲ್ಲಿಯೂ ಇದೆ. ಪ್ರಶ್ನೆಪತ್ರಿಕೆಗಳಲ್ಲಿ ತಪ್ಪುಗಳಿರುವುದು ಹಾಗೂ ಅದಕ್ಕೆ ಕೃಪಾಂಕ ನೀಡುವುದು ಕೂಡ ಪರೀಕ್ಷಾವಿಧಿಯ ಭಾಗವಾಗಿಬಿಟ್ಟಿದೆ.

ನೈತಿಕತೆ, ನಾಚಿಕೆ ಎನ್ನುವ ಶಬ್ದಗಳು ಶಿಕ್ಷಣ ಇಲಾಖೆಯ ನಿಘಂಟಿನಲ್ಲಿ ಇದ್ದಂತಿಲ್ಲ. ಮಕ್ಕಳನ್ನು ಪರೀಕ್ಷೆಯ ಒತ್ತಡದಿಂದ ಪಾರಾಗಲು ಸಲಹೆಗಳನ್ನು ನೀಡುವ ಪ್ರಧಾನಿ, ಮೊದಲು ಅಧಿಕಾರಿಗಳ ಕಿವಿ ಹಿಂಡಬೇಕಿದೆ. 'ಸ್ವಚ್ಛ ಭಾರತ'ದ ಪರಿಕಲ್ಪನೆ ಶಿಕ್ಷಣ ಇಲಾಖೆಯಲ್ಲಿನ ಕೊಳಕು ಹೋಗಲಾಡಿಸಲೂ ಅನ್ವಯಿಸಬೇಕು.

■ ರಘುನಾಥ ಚ.ಹ.

